ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿಸಿ.ನಂ. 791/2017

ಪಿರ್ಯಾದುದಾರರು : ನ್ಯಾಮತಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ರಾಜಪ್ಪ ಡಿ. ಜಿ,
ಬಿನ್ ಲೇಟ್ ಬಸಪ್ಪ, 55 ವರ್ಷ,
2. ಕರಿಬಸಪ್ಪ ಡಿ. ಇ
ಬಿನ್ ಲೇಟ್ ಈಶ್ವರಪ್ಪ, 39 ವರ್ಷ,
ಇವರಿಬ್ಬರ ವಾಸಃ ದೊಡ್ಡೇರಿ ಗ್ರಾಮ, ಹೊನ್ನಾಳಿ ತಾಲ್ಲೂಕು.

ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಗಳ ಹೇಳಿಕೆ

ಪ್ರಶ್ನೆ.1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ.2: ಪ್ರಾಸಾ.1 ಹನುಮಂತಪ್ಪರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 14.03.2017 ರಂದು ಮಧ್ಯಾಹ್ನ 1 ರಿಂದ 2 ಗಂಟೆ ಸಮಯದಲ್ಲಿ ಚಾಸಾ 1, 4 ಮತ್ತು ಆರೋಪಿತರ ನಡುವೆ ಆದ ಜಗಳ ಗಲಾಟೆಯ ವಿಚಾರದಲ್ಲಿ ಪೋಲೀಸಿನವರು ಮಹಜರ್ ಮಾಡಲು ಬಂದಾಗ ತಾನು ಮತ್ತು ಚಾಸಾ 3 ರವರು ಹಾಜರಿದ್ದು ಸಹಿಯನ್ನು ಮಾಡಿರುತ್ತೇವೆ. ಚಾಸಾ 1 ರವರು ಸ್ಥಳದಲ್ಲಿದ್ದು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ತನ್ನ ಸಮಕ್ಷಮ ಪೋಲೀಸರು ಆರೋಪಿತರು ಹಲ್ಲೆಯ ಸಮಯದಲ್ಲಿ ಚಾಸಾ 1 ರವರು ಹರಿದು ಹಾಕಿದ ಚೂಡಿದಾರವನ್ನು ಹಾಜರುಪಡಿಸಿದ ಮೇರೆಗೆ ಅಮಾನತ್ತುಪಡಿಸಿಕೊಂಡು ಮಹಜರ್ ಕ್ರಮವನ್ನು ಜರುಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿ, ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಈ ಬಗ್ಗೆ ಪೋಲೀಸಿನವರಿಗೆ ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ?

ಉತ್ತರ :

ಪ್ರಶ್ನೆ.3: ಪ್ರಾಸಾ.2 ಶಿವುರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಸುಮಾರು 8-9 ವರ್ಷಗಳ ಹಿಂದೆ ಗಲಾಟೆಯಾಗುತ್ತಿದ್ದು, ತಾವು ಕೆಲಸ ಮಾಡುತ್ತಿದ್ದಾಗ ಗಲಾಟೆ ಶಬ್ದ ಕೇಳಿ ಹೋಗಿರುತ್ತೇವೆ. ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ?

ಉತ್ತರ :

ಪ್ರಶ್ನೆ.4: ಪ್ರಾಸಾ.4 ತಿಪ್ಪೇಸ್ವಾಮಿ ಟಿ. ಎನ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 15.03.2017 ರಂದು ಈ ಪ್ರಕರಣದ ಕಡತವನ್ನು ಚಾಸಾ 12 ರವರಿಂದ ಪಡೆದುಕೊಂಡು ಪರಿಶೀಲಿಸಿ, ಚಾಸಾ 1 ರವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ 164 ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 17.04.2017 ರಂದು ಆರೋಪಿಗಳು ನಿರೀಕ್ಷಣಾ ಜಾಮೀನಿನೊಂದಿಗೆ ಠಾಣೆಗೆ ಹಾಜರಾಗಿದ್ದು ಠಾಣಾ ಜಾಮಿನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 30.05.2017 ರಂದು ಕೃತ್ಯ ಸ್ಥಳದ ಖಾತಾ ಎಕ್ಸ್ಟ್ರಾಕ್ಟ್ ನ್ನು ಚಾಸಾ 8 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 1 ಮತ್ತು 4 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ 9 ರವರಿಂದ ಪಡೆದುಕೊಂಡಿರುತ್ತೇನೆ. ಆರೋಪಿಗಳ ವಿರುದ್ಧ ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿಕೊಂಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.5: ಪ್ರಾಸಾ.5 ಕರಿಬಸಪ್ಪ ಎಂ. ಸಿ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 13.03.2017 ರಂದು ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಚಾಸಾ - 1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರನ್ನು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.47/2018 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 12 ರವರಿಗೆ ಹಸ್ತಾಂತರಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.6: ಪ್ರಾಸಾ.6 ಡಾ.ಯೋಗೇಶ್. ಕೆ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿನಾಂಕಃ 13.03.2017 ರಂದು ಬೆಳಿಗ್ಗೆ 11.30 ಗಂಟೆಗೆ ಚಾಸಾ-1 ಮತ್ತು 4 ರವರು ಹಲ್ಲೆಯ ಇತಿಹಾಸದಲ್ಲಿ ಚಿಕಿತ್ಸೆ ಪಡೆಯಲು ಚೀಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿದ್ದು, ತಾನು ಅವರನ್ನು ಪರೀಕ್ಷಿಸಿದಾಗ ಚಾಸಾ 1 ರವರಿಗೆ ಎಡಗೈಯಲ್ಲಿ ತರಚಿದ ಗಾಯ ಮತ್ತು ಚಾಸಾ 4 ರವರಿಗೆ ಎಡಕಿವಿ ಹತ್ತಿರ ನೋವು ಮತ್ತು ಎಡಕುತ್ತಿಗೆಯ ಹತ್ತಿರ ತರಚಿದ ಗಾಯಗಳಾಗಿದ್ದು, ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳೆಂದು ಅಭಿಪ್ರಾಯಪಟ್ಟಿರುತ್ತೇನೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರಗಳನ್ನು ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.7: ಪ್ರಾಸಾ.7 ಶಿವಾನಂದಪ್ಪರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 14.03.2017 ರಂದು ಚಾಸಾ 11 ರವರಿಂದ ಈ ಕೇಸಿನ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿ, ಅದೇ ದಿನ ಚಾಸಾ 1 ರವರ ಮರುಹೇಳಿಕೆ ಪಡೆದುಕೊಂಡು, ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 1 ರಿಂದ 2 ರ ಸಮಯದಲ್ಲಿ ಸ್ಥಳ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ತಯಾರಿಸಿ, ಫೋಟೋಗಳನ್ನು ತೆಗೆಸಿ, ಚಾಸಾ 1 ರವರು ಹಾಜರುಪಡಿಸಿದ ಕೇಸರಿ ಮತ್ತು ಬಳಿ ಬಣ್ಣದ ಚೂಡಿದಾರ್ ಟಾಪ್ ಮತ್ತು ಕೇಸರಿ ಬಣ್ಣದ ಚೂಡಿದಾರ್ ಪ್ಯಾಂಟ್ ನ್ನು ವಶಪಡಿಸಿಕೊಂಡು ಠಾಣಾ ಮಾಲು ಪಟ್ಟಿಯಲ್ಲಿ ಸೇರಿಸಿಕೊಂಡಿರುತ್ತೇನೆ. ಚಾಸಾ 2 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 17 ರವರಿಗೆ ಹಸ್ತಾಂತರಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.8: ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ :

ಆ 1). ಆ 2).

ಪ್ರಶ್ನೆ.9: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ :

ಆ 1). ಆ 2).

(ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿಗಳಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ).

ಸ್ಥಳ : ಹೊನ್ನಾಳಿ

ದಿನಾಂಕಃ 16.05.2026

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.